# Press Statement on incident involving loss of lives of Indian fishermen

January 21, 2021

## ಭಾರತೀಯ ಮೀನುಗಾರರ ಸಾವಿನ ಘಟನೆ ಕುರಿತು ಪತ್ರಿಕಾ ಪ್ರಕಟಣೆ

ಜನವರಿ 21, 2021

ನಮ್ಮ ಹಡಗು ಮತ್ತು ಶ್ರೀಲಂಕಾದ ನೌಕಾ ಹಡಗು ನಡುವೆ ಡಿಕ್ಕಿ ಹೊಡೆದ ನಂತರ ಮೂವರು ಭಾರತೀಯ ಮೀನುಗಾರರು ಹಾಗೂ ಶ್ರೀಲಂಕಾದ ಒಬ್ಬ ಪ್ರಜೆಯ ದುರದೃಷ್ಟಕರ ಸಾವಿನಿಂದ ನಾವು ಆಘಾತಕ್ಕೊಳಗಾಗಿದ್ದೇವೆ.

ನಮ್ಮ ತೀವ್ರ ವಿರೋಧವನ್ನು ಇಂದು ನಮ್ಮ ಹೈಕಮಿಷನರ್ ಶ್ರೀಲಂಕಾದ ವಿದೇಶಾಂಗ ಸಚಿವರಿಗೆ ತಿಳಿಸಿದರು. ತೀವ್ರ ಆಕ್ಷೇಪಣೆಯನ್ನು ನವದೆಹಲಿಯ ಶ್ರೀಲಂಕಾದ ಕಾರ್ಯಕಾರಿ ಹೈಕಮಿಷನರ್‌ಗೆ ಹಸ್ತಾಂತರಿಸಲಾಯಿತು.

ಮೀನುಗಾರರ ಸಾವಿನ ಬಗ್ಗೆ ನಮ್ಮ ತೀವ್ರ ದುಃಖವನ್ನು ವ್ಯಕ್ತಪಡಿಸಿ, ಮೀನುಗಾರರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಮಾನವೀಯವಾಗಿ ಎದುರಿಸುವ ಅಗತ್ಯವನ್ನು ನಾವು ಒತ್ತಿಹೇಳಿದ್ದೇವೆ. ಈ ನಿಟ್ಟಿನಲ್ಲಿ ಎರಡು ಸರ್ಕಾರಗಳ ನಡುವೆ ಅಸ್ತಿತ್ವದಲ್ಲಿರುವ ಒಪ್ಪಂದಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಈ ಘಟನೆ ಮರುಕಳಿಸದಂತೆ ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕು.

**ನವ ದೆಹಲಿ**
**ಜನವರಿ 21, 2021**

DISCLAIMER: This is an approximate translation. The original is available in English on MEA’s website and may be referred to as the official press release.